# 8

## ಮೂಲ ವಾಕ್ಯ: 1 ಕೊರಿಂಥ 11:23-25

# ಪ್ರಸ್ತುತ ಆಚರಣೆ

ದೇವರ ವಾಕ್ಯಕ್ಕನುಗುಣವಾದ ಕರ್ತನ ಭೋಜನದ ಆಚರಣೆಯನ್ನು ಮಾತ್ರ ಮಾಡಬೇಕು. ಏನನ್ನು ಮಾಡಬೇಕು ಮತ್ತು ಯಾವಾಗ ಮಾಡಬೇಕು ಎಂಬ ನಿಯಮವನ್ನು ದೇವರು ತಿಳಿಸಿರುವನು, ಆದರೆ ಅದನ್ನು ಯಾವ ವಿಧದಲ್ಲಿ ಮಾಡಬೇಕು ಎಂಬುದನ್ನು ತಿಳಿಸಿರುವದಿಲ್ಲ. ಇದರ ಕುರಿತು ಸಲಹೆ ಸೂಚನೆಗಳು ಇರುವದಾದರೂ ಯಾವುದೇ ಅಪ್ಪಣೆಯನ್ನು ನೀಡಿರುವದಿಲ್ಲ. ಮನುಷ್ಯನು ತನ್ನ ವಿವೇಕಕ್ಕನುಗುಣವಾಗಿ ಕರ್ತನ ಭೋಜನದ ಆಚರಣೆಯನ್ನು ಮಾಡಬಹುದಾಗಿದೆ.

### ಕರ್ತನ ಭೋಜನದ ಪದಾರ್ಥಗಳನ್ನು ಪಡಕೊಳ್ಳುವದು

ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಅಂಗಡಿಯಿಂದ ಖರೀದಿ ಮಾಡಬಹುದು ಅಥವಾ ಮನೆಯಲ್ಲೇ ತಯಾರಿಸಬಹುದಾಗಿದೆ. ಸಭಾ ನಾಯಕರು ಅದರ ನಿರ್ಧಾರವನ್ನು ಮಾಡಬಹುದು. ರೊಟ್ಟಿಯು ಹುಳಿ ಇಲ್ಲದು ಹಾಗೂ ಶುದ್ಧವಾದ ದ್ರಾಕ್ಷಾರಸವಾಗಿರಬೇಕು. ಯೇಸು ಸಹ ಇಂಥವುಗಳನ್ನೇ ಬಳಸಿದ್ದನು.

### ಭೋಜನವನ್ನು ನೀಡುವ ಮೊದಲು

ಭೋಜನದ ಮೊದಲು ಏನನ್ನು ಹೇಳಬೇಕೆಂದು ವೇದವು ತಿಳಿಸುವದಿಲ್ಲ. ಆ ರೊಟ್ಟಿಯು, ತನ್ನ ದೇಹವೇ ಎಂದು ಯೇಸು ತನ್ನ ಶಿಷ್ಯರಿಗೆ ಸಂಕ್ಷಿಪ್ತವಾಗಿ ತಿಳಿಸಿದ್ದನು (ಲೂಕ 22:19; 1 ಕೊರಿಂಥ 11:24). ರೊಟ್ಟಿಯನ್ನು ತಿಂದ ಮೇಲೆ, ದ್ರಾಕ್ಷಾರಸವನ್ನು ಅಪೊಸ್ತಲರಿಗೆ ನೀಡಿ, ಇದು ಹೊಸ ಒಡಂಬಡಿಕೆಯ ಸ್ಥಾಪನೆಯ ನನ್ನ ರಕ್ತ ಅನೇಕರ ಪಾಪಗಳಿಗಾಗಿ ಸುರಿಲ್ಪಡುವ ನನ್ನ ರಕ್ತವೆಂದು ಹೇಳಿದನು (ಮತ್ತಾಯ 26:28; ಮಾರ್ಕ 14:24; ಲೂಕ 22:20; 1 ಕೊರಿಂಥ 11:25; ನೋಡಿರಿ ಪ್ರಕಟನೆ 1:5).

ಭೋಜನದ ಮೊದಲು ಹಾಡಿದ ಸಂಗೀತದ ಬಗ್ಗೆಯೂ ತಿಳಿಸಿರುವದಿಲ್ಲ. ಹಾಡು ಆರಾಧನೆಗಾಗಿ ಮೀಸಲಾಗಿರುವದರಿಂದ (ನೋಡಿರಿ ಎಫೆಸ 5:19; ಕೊಲೊಸ್ಸೆ 3:16), ಆತನ ಜೀವನ, ಪ್ರೀತಿ, ಯಜ್ಞ ಪುನರುತ್ಥಾನ; ಹಾಗೂ ಬರೋಣದ ಕುರಿತ (ಹಾಡುಗ ಳನ್ನು) ಹಾಡುವದು ಯೋಗ್ಯವಾಗಿದೆ.

ಜನರು ಆತ್ಮೀಕ ಅಭಿವೃದ್ಧಿಯನ್ನು ಹೊಂದಿ, ಆತನ ಸಮೀಪಕ್ಕೆ ಬರುವಂತೆ ಪ್ರೇರಕವಾದ ಭೋಧನೆಯನ್ನು ಮಾಡಬಹುದು. ಬೋಧಿಸುವವನು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:

- ವಾಕ್ಯಗಳನ್ನು ಎಚ್ಚರಿಕೆಯಿಂದ ಆಯ್ಕೆಮಾಡಿ, ಅದನ್ನು ಯೇಸುವಿನ ವಿಚಾರಕ್ಕೆ ಪರಿವರ್ತಿಸಿ, ಆತ್ಮೀಕ ಸಂಗತಿಗಳನ್ನು ಚರ್ಚಿಸಬೇಕು.
- ಸಭೆ ಯೇಸುವಿನ ಮೇಲೆ ತಮ್ಮ ಮನಸ್ಸನ್ನು ಕೇಂದ್ರಿಕರಿಸಬೇಕು.
- ಪ್ರಸಂಗಿಯ ಕಡೆಗೆ, ಸಭೀಕರ ಮನಸ್ಸು ಕೇಂದ್ರಿಕೃತವಾಗಬಾರದು ಕ್ರಿಸ್ತನನ್ನು ಆತನ ಕ್ರೂಜಿಯ ಮರಣವನ್ನು ಮಾತ್ರ ಕೊಂಡಾಡಬೇಕು (1 ಕೊರಿಂಥ 2:2),

ಕ್ರಿಸ್ತನೇ, ಕರ್ತನ ಭೋಜನದ ಕೇಂದ್ರ ವ್ಯಕ್ತಿ.

## ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಹಂಚುವ ಕ್ರಮ

ಎರಡನೇ ಶತಮಾನದ ಆರಂಭದಲ್ಲಿ, ಸಭಾ ಹಿರಿಯರೇ ಹಂಚುವ ಕಾರ್ಯವನ್ನು ನಡೆಸುತ್ತಿದ್ದರು. ಕ್ರಿ.ಶ. 110ರಲ್ಲಿ ಇಗ್ನೇಷಿಯಸ್ ಎಂಬಾತನು ಬೋಧಿಸಿ,

> ಸಭೆಯ ಕುರಿತಾದ ಸಂಗತಿಗಳನ್ನು ಸಭಾಧ್ಯಕ್ಷನ ಹೊರತು, ಬೇರೆ ಯಾರೂ ಮಾಡದಿರಲಿ. ಕರ್ತನ ಭೋಜನದ ಸಂಸ್ಕಾರವನ್ನು ಸಭಾಧ್ಯಕ್ಷರ ಮೇಲ್ವಿ ಚಾರಣೆಯಲ್ಲಿ ಮಾತ್ರ ಮಾಡಲಿ, ಏಕೆಂದರೆ ಅವರು ಅದಕ್ಕಾಗಿ ನೇಮಕ ಗೊಂಡವರು.[1]

ಕ್ರಿ.ಶ. 200 ರ ಹಾಸು ಪಾಸಿನಲ್ಲಿ, ರೋಮಾಯದ ಹಿಪ್ಪೊ ಲಿಟಸ್ ಎಂಬಾತನು, ಆದಿಸಭೆಯ ಕುರಿತು ಬಹಳಷ್ಟು ಬರವಣಿಗೆಯನ್ನು ಮಾಡಿರುವನು, ಅವನು ಸರಳವಾದ ಪ್ರಾರ್ಥನೆಯ ನಮೂನೆಯನ್ನು ಬರೆದು,

> ಹೇಳಿಕೆಯ ಪ್ರಕಾರ ಸಭಾಧ್ಯಕ್ಷನು ಸ್ತೋತ್ರವನ್ನು ಸಲ್ಲಿಸಲಿ. ಸಂಕ್ಷಿಪ್ತವಾದ ಪ್ರಾರ್ಥನೆಯನ್ನು ಮಾತ್ರ ಹೇಳದೆ, ಸ್ವತಂತ್ರ್ಯ ಪ್ರಾರ್ಥನೆ ಮಾಡಲು ಅವನಿಗೆ ಯಾರೂ ಅಡ್ಡಪಡಿಸದಿರಲಿ.[2]

ಹಿರಿಯರು ಮಾತ್ರ ಕರ್ತನ ಭೋಜನದ ಮೇಲ್ವಿಚಾರಣೆ ಮಾಡುವದರಲ್ಲಿ ಯಾವುದೇ ತಪ್ಪಿರುವದಿಲ್ಲ, ಆದರೆ ಅದು ಖಡ್ಡಾಯವಾಗದಿರಲು. ಯಾಕಂದರೆ, ಯಾವ ಮನುಷ್ಯನು ಕರ್ತನ ಭೋಜನವನ್ನು ಹಂಚಬೇಕು ಎಂದು ಸತ್ಯವೇದವು ನಿಕರವಾಗಿ ಹೇಳದೆ ಇರುವದರಿಂದ, ನಂಬಿಗಸ್ತನಾದ ಯಾವುದೇ ಕ್ರೈಸ್ತನು ಈ ಕಾರ್ಯವನ್ನು ಮಾಡಬಹುದಾಗಿದೆ. ಸ್ತ್ರೀಯರು ಉಪದೇಶ ಮಾಡಬಾರದು ಎಂದು ಲಿಖಿತವಿರುವದರಿಂದ, ಅವರಿಗೆ ಈ ಕಾರ್ಯವು ನಿಷಿದ್ಧವಾಗಿರುತ್ತದೆ (1 ಕೊರಿಂಥ 14:34, 35) ಅಥವಾ ಆರಾಧನೆಯ ನಾಯಕತ್ವವನ್ನು ಅವರು ಹೊಂದಬಾರದು (1 ತಿಮೋಥೆ 2:11, 12). ಆದಿ ಸಭೆಯ ಚರಿತ್ರೆಯ ಪ್ರಕಾರ ಸ್ತ್ರೀಯರನ್ನು ಹೊರತುಪಡಿಸಿ, ಪುರುಷರು ಮಾತ್ರ ಸಾರ್ವಜನಿಕ ಕಾರ್ಯವನ್ನು ಮಾಡಿದರು ಎಂದು ತಿಳಿಯಲಾಗಿದೆ.

ಜನರಿಗೆ ದ್ರಾಕ್ಷಾರಸ ಹಾಗೂ ರೊಟ್ಟಿಯನ್ನು ಹಂಚುವ ಕ್ರಮವನ್ನು ಹೊಸ ಒಡಂಬಡಿಕೆಯು ತಿಳಿಸುವದಿಲ್ಲ. ಈ ಕೆಳಕಂಡ ಕಾರ್ಯಗಳನ್ನು ಸಭೆಗಳವರು ಮಾಡುತ್ತಾರೆ:

- ಕರ್ತನ ಭೋಜನವನ್ನು ಸ್ವೀಕರಿಸಲು, ಸದಸ್ಯರು ಮೇಜಿನ ಬಳಿಗೆ ಬರುತ್ತಾರೆ.
- ಹಂಚುವವರು ಗುರುತುಗಳನ್ನು ಜನರಿರುವ ಸ್ಥಳಕ್ಕೆ ಹೊಯ್ಯಬಹುದು.
- ಹಂಚುವವರು ಮೊದಲು ರೊಟ್ಟಿಯನ್ನು ಕುಳಿತಿರುವ ಸಭೆಯವರಿಗೆ ಮುಂದಿನ ಭಾಗದಿಂದ ಆರಂಭಮಾಡಿ, ಪ್ರಾರ್ಥಿಸಿದ ನಂತರ ದ್ರಾಕ್ಷಾರಸವನ್ನು ಹಿಂದಿನ ಭಾಗದಿಂದ ನೀಡಬಹುದಾಗಿದೆ.
- ಕೆಲವು ಸಭೆಯವರು ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಎಲ್ಲರಿಗೂ ಹಂಚುವ ತನಕ ಕಾದಿದ್ದು ನಂತರ ಎಲ್ಲರೂ ಒಟ್ಟಾಗಿ ಭುಜಿಸುವರು.

## ಕೂಟದ ಕ್ರಮ

ರೊಟ್ಟಿಯನ್ನು ಮುರಿದು ಯೇಸು ತನ್ನ ಅಪೊಸ್ತಲರಿಗೆ ನೀಡಿದ ನಂತರ, ಅವರು ಪಾನವನ್ನು ಕುಡಿದರು. ಯೇಸುವಿನ ಕ್ರಮವನ್ನೇ ಅನುಸರಣೆ ಮಾಡಬಹುದು (ಓದಿ ಮತ್ತಾಯ 26:26, 27; ಮಾರ್ಕ 14:22, 23; ಲೂಕ 22:17-20; 1 ಕೊರಿಂಥ 11:23-25).

ಆತನು ರೊಟ್ಟಿಯನ್ನು ಈ ಕೆಳಕಂಡಂತೆ ಮಾಡಿದ:

- ಕೈಗೆ ತೆಗೆದುಕೊಂಡನು.
- ಸ್ತೋತ್ರದಿಂದ ಆಶೀರ್ವದಿಸಿದನು.
- ಮುರಿದನು.
- ಅಪೊಸ್ತಲರಿಗೆ ನೀಡಿದನು.
- ಆತನ ನೆನಪಿಗಾಗಿ ಅದನ್ನು ತಿನ್ನಬೇಕು ಅಂದನು.

ಪಾತ್ರೆಯ ಕ್ರಮ:

- ಸ್ತೋತ್ರ ಮಾಡಿ, ಅಪೊಸ್ತಲರಿಗೆ ನೀಡಿದನು.
- ತನ್ನ ನೆನಪಿಗಾಗಿ ಕುಡಿಯಬೇಕು ಅಂದನು.

"ರೊಟ್ಟಿಯನ್ನು ಮುರಿದ" ತಕ್ಷಣ ನೀಡಿದನು ಎಂಬ ಹೇಳಿಕೆಯನ್ನು ಹೆಚ್ಚು ಗಮನಿಸಬಾರದು (ಅಪೊಸ್ತಲರ ಕೃತ್ಯಗಳು 2:42) (ಅಪೊಸ್ತಲರ ಕೃತ್ಯಗಳು 20:7; ನೋಡಿರಿ 1 ಕೊರಿಂಥ 10:16). ಕರ್ತನ ಭೋಜನಕ್ಕೆ "ರೊಟ್ಟಿ ಮುರಿಯುವದು" ಎಂಬ ಹೇಳಿಕೆಯನ್ನು ನೀಡಲಾಗಿದೆ.

## ಭೋಜನದ ಪ್ರಾರ್ಥನೆ

ಕರ್ತನ ಭೋಜನದ ಸಮಯದಲ್ಲಿ ಯೇಸು ಮಾಡಿದ ಪ್ರಾರ್ಥನೆಗೆ ಎರಡು ಗ್ರೀಕ್ ಪದಗಳನ್ನು ಬಳಸಲಾಗಿದೆ: ಯೂಲೋಜಿಯೋ, ಅಂದರೆ ಆಶೀರ್ವದಿಸು (ಯೂಲೋಜಿಯ ಪದದ ಮೂಲ), ಮತ್ತು *"ಯೂಕರಿಸ್ಟಿಯೋ,"* ಕೃತಜ್ಞತೆ (ಯೂಕರಿಸ್ಟ್ ಪದದ ಮೂಲ).

ಮತ್ತಾಯ ಹಾಗೂ ಮಾರ್ಕನ ಪ್ರಕಾರ, ಯೇಸು ರೊಟ್ಟಿಯನ್ನು "ಆಶೀರ್ವದಿಸಿದನು": "ಯೇಸು ಕೆಲವು ರೊಟ್ಟಿಗಳನ್ನು ಕೈಯಲ್ಲಿ ತೆಗೆದುಕೊಂಡು, ಅದನ್ನು ಆಶೀರ್ವದಿಸಿದ ನಂತರ ಮುರಿದನು" (ಮತ್ತಾಯ 26:26; ಮಾರ್ಕ 14:22).

ರೊಟ್ಟಿಗಾಗಿ ಯೇಸು ಕೃತಜ್ಞತೆ ಹೇಳಿದನು ಎಂದು ಲೂಕ ಮತ್ತು ಪೌಲರು ತಿಳಿಸಿರುವರು *(ಯುಕರಿಸ್ಟಿಯೋ).* "ಬಳಿಕ" ಆತನು ರೊಟ್ಟಿಯನ್ನು ತೆಗೆದುಕೊಂಡು ಸ್ತೊತ್ರ ಮಾಡಿ ಮುರಿದು ಅವರಿಗೆ ಕೊಟ್ಟನು (ಲೂಕ 22:19); "ಕರ್ತನಾದ ಯೇಸು ... ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದನು ..." (1 ಕೊರಿಂಥ 11:23ಬಿ, 24ಎ).

ದ್ರಾಕ್ಷಾರಸಕ್ಕಾಗಿ ಪ್ರಾರ್ಥಿಸುವಾಗ ಯೇಸು "ಕೃತಜ್ಞತೆ" ಸಲ್ಲಿಸಿದನು *(ಯುಕರಿಸ್ಟಿಯಾ)* (ಮತ್ತಾಯ 26:27; ಮಾರ್ಕ 14:23). ಪೌಲನು ಈ ಕುರಿತು ತಿಳಿಸಿರುವದಿಲ್ಲ (1 ಕೊರಿಂಥ 11:25).

"ಆಶೀರ್ವಾದ" ಹಾಗೂ "ಕೃತಜ್ಞತೆ" ಎಂಬ ಪದಗಳನ್ನು ಆಂತರಿಕವಾಗಿ ಬದಲುಮಾಡಲಾಗಿದೆ. ಆಶೀರ್ವಾದ ಎಂದರೆ "ಕೃತಜ್ಞತೆ" *(ಯುಕರಿಸ್ಟ್)* ಅಥವಾ ವಿಶೇಷ ಸನ್ಮಾನಕ್ಕಾಗಿ ಮೆಚ್ಚುಗೆ, ಮತ್ತಾಯನು "ಸ್ತೊತ್ರಮಾಡಿ" *(ಯುಕರಿಸ್ಟಿಯಾ)* ಅಂದರೆ ನಾಲ್ಕು ಸಾವಿರ ಜನರಿಗೆ ಊಟವನ್ನು ನೀಡುವ ಮೊದಲು ಯೇಸು ರೊಟ್ಟಿ ಮುರಿಯುವ ಮುನ್ನ ಪ್ರಾರ್ಥಿಸಿದನು. ಎಂಬ ಪದ ಬಳಕೆ ಮಾಡಿರುವನು (ಮತ್ತಾಯ 15:36-38). ಮಾರ್ಕನು "ಆಶೀರ್ವದಿಸಿದನು" (ಮಾರ್ಕ 8:7-9). *(ಯುಲೋಜಿಯೋ)* ಎಂಬ ಪದ ಬಳಸಿರುವನು.

ಕರ್ತನ ಮೇಜಿನಲ್ಲಿ ಪಾಲುಗಾರರಾಗುವ ಮೊದಲು ಮಾಡುವ ಪ್ರಾರ್ಥನೆಯಲ್ಲಿ ಯೇಸು ಶಿಲುಬೆಯ ಮೇಲೆ ಮಾಡಿದ ಯಜ್ಞಕ್ಕಾಗಿ ಕೃತಜ್ಞತೆಯು ಒಳಗೊಂಡಿರ ಬೇಕು. ಅದು ವೈಯಕ್ತಿಕ

ಪ್ರಾರ್ಥನೆಯಾಗಿರದೆ, ಮೌನವಾಗಿ ಸಭೆಯಲ್ಲಿ ಮಾಡಿದ ಪ್ರಾರ್ಥನೆಯಾಗಿರಬೇಕು. ಅದು ಬಹಳ ಉದ್ದವಾದ ಪ್ರಾರ್ಥನೆಯಾಗಿರದೆ, ಅದು ಯಥಾರ್ಥವಾದ ಹಾಗೂ ಸರಳತೆಯನ್ನು ಒಳಗೊಂಡಿರಬೇಕು.

ಕೆಲವರು ರೊಟ್ಟಿ ಮತ್ತು ಪಾತ್ರೆಗಾಗಿ ಒಂದೇ ಸಾರಿ ಪ್ರಾರ್ಥಿಸುವರು, ನಂತರ ಅವುಗಳನ್ನು ಸಭೆಗೆ ನೀಡುವರು. ರೊಟ್ಟಿಗಾಗಿ ಪ್ರಾರ್ಥನೆ ಮಾಡಿದ ನಂತರ ಯೇಸು ಪಾನ ಪಾತ್ರೆಗಾಗಿ ಮಾಡಿದ ಪ್ರಾರ್ಥನೆಗೆ ಒಳ್ಳೆಯ ಕಾರಣವಿರಬೇಕು. ಆದ್ದರಿಂದ ಯೇಸುವಿನ ನಿದರ್ಶನವನ್ನೇ ಪಾಲಿಸುವದು ಒಳಿತಾಗಿದೆ.

## ಅದು ಯಾರಿಗಾಗಿ?

ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಚಿಕ್ಕ ಮಕ್ಕಳಿಗೆ, ಕ್ರೈಸ್ತರಲ್ಲದವರಿಗೂ, ಹಾಗೂ ಹೊಸದಾಗಿ ಬಂದಿರುವವರಿಗೆ ನೀಡಬಹುದೇ? ಕೆಲವು ಸಭಿಕರು ಇತರ ಸಭೆಯಿಂದ ಬಂದವರು, ಅವರ ಸಭೆಯಿಂದ ಶಿಫಾರಸ್ಸು ಪತ್ರವನ್ನು ಬಯಸುತ್ತಾರೆ. ಹಾಗೂ ಅದರ ಅಗತ್ಯವಿರುವದಿಲ್ಲ. ಇನ್ನು ಕೆಲವರು ತಮ್ಮ ಸಭೆಯ ಸದಸ್ಯರುಗಳಿಗೆ ಮಾತ್ರ ನೀಡುತ್ತಾರೆ. ಹೊಸ ಒಡಂಬಡಿಕೆಯಲ್ಲಿ ಈ ವಿಧವಾದ ಆಚರಣೆಗಳು ಇರುವದಿಲ್ಲ.

ಕರ್ತನ ಭೋಜನದ ಮಾಹಿತಿ ಇಲ್ಲದ ಅತಿಥಿಗಳು ಬಂದಿದ್ದರೆ, ಯಾರಾದರು ಸಭಿಕರು, ಕರ್ತನ ಭೋಜನದಲ್ಲಿ ಯಾರು ಪಾಲುದಾರರಾಗಬೇಕು ಎಂಬ ಮಾಹಿತಿಯನ್ನು ನೀಡಬೇಕು. ಕರ್ತನ ದೇಹದಲ್ಲಿ ಒಂದಾಗಿರುವವರು ಮಾತ್ರ. ಕರ್ತನ ಭೋಜನದಲ್ಲಿ ಪಾಲುದಾರರಾಗ ಬೇಕು (1 ಕೊರಿಂಥ 10:16, 17; 12:13), ಅವರು ಸಭೆಯಲ್ಲಿ ಇರಬೇಕು (ಕೊಲೊಸ್ಸೆ 1:18). ಕ್ರೈಸ್ತರು ಆತನ ದೇಹ ವಾಗಿದ್ದಾರೆ (ರೋಮಾಪುರ 12:5), ಅವರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿರಬೇಕು (ರೋಮಾಪುರ 6:3; ಗಲಾತ್ಯ 3:27).

ದೀಕ್ಷಾಸ್ನಾನ ಹೊಂದದೆ ಇರುವ ಮಕ್ಕಳಿಗೆ ನೀಡಬಾರದು. ಆರಾಧನೆಗೆ ಬಂದಿರುವ ಕ್ರೈಸ್ತರು ತಮ್ಮನ್ನು ಪರೀಕ್ಷಿಸಿಕೊಂಡು, ಯೋಗ್ಯರಾಗಿ ಪಾಲುಗಾರರಾಗಬೇಕು (1 ಕೊರಿಂಥ 11:27, 28). ಯಾರಿಗೆ ಕೊಡಬಾರದು ಎಂದು ಸಭೆಯು ನಿರ್ಧರಿಸಿದೆಯೋ, ಅವರನ್ನು ಹೊರತುಪಡಿಸಿ ಪ್ರತಿ ಕ್ರೈಸ್ತರಿಗೆ ನೀಡಬೇಕು (1 ಕೊರಿಂಥ 5:11).

## ರಾತ್ರಿ ಭೋಜನದ ನಿಗಧಿಯಾಗಿರುವ ಸಮಯ

ವಾರದ ಮೊದಲನೆಯ ದಿನವೆಂದು ವಾಕ್ಯವು ಖಚಿತವಾಗಿ ಹೇಳುವದಾದರು ನಿಖರವಾದ ಸಮಯದ ಬಗ್ಗೆ ತಿಳಿಸಿರುವದಿಲ್ಲ. ತ್ರೋವದ ಸಭೆಯವರು ವಾರದ ಮೊದಲನೆಯ ದಿನವಾದ ಭಾನುವಾರದಂದು ಸೇರಿಬಂದರು (ಅಪೊಸ್ತಲರ ಕೃತ್ಯಗಳು 20:6, 7). ಸಮಯವು ಪ್ರಮುಖವಾಗಿರದೆ ಇರುವದರಿಂದ, ಸಭೆಯವರು ವಾರದ ಮೊದಲನೆಯ ದಿನದ ವಾರದ ಮೊದಲನೆಯ ದಿನದ ಮುಂಜಾನೆ ಅಂದರೆ ತಾವುಗಳು ಕೆಲಸಕ್ಕೆ ಹೋಗುವ ಮುನ್ನ ಸೇರಿ ಬರುತ್ತಿದ್ದರು.

ಸಭೆಯು ನಡೆಯುವ ಯಾವ ಸಮಯದಲ್ಲಾದರೂ ಕರ್ತನ ಭೋಜನವನ್ನು ಮಾಡಬಹುದು. ಆರಂಭದ ಮಧ್ಯದಲ್ಲಿ ಅಥವಾ ಕೂಟದ ಅಂತ್ಯದಲ್ಲಿ ಮಾಡಬಹುದು. ಕರ್ತನ ಭೋಜನವನ್ನೇ ಕೇಂದ್ರ ಕಾರ್ಯವನ್ನಾಗಿ ಮಾಡಿಕೊಂಡು ಕೂಟದ ಏರ್ಪಾಟನ್ನು ಮಾಡಬಹುದು. ಕರ್ತನ ಮೇಜಿನ ಮುಂದೇ ಸೇರಿ ಬರುವಾಗ, ದೇವರ ಕುರಿಮರಿಯ ಗೌರವಕ್ಕಾಗಿ ಹಾಡುಗಳನ್ನು, ವಾಕ್ಯಗಳನ್ನು ಹಾಗೂ ಪ್ರಸಂಗವನ್ನು ಮಾಡಬಹುದು.

ಸಭೆಯ ಕೆಲವರು ಮುಂಜಾನೆ ಸೇರಿ ಬರಲು ಅಸಾಧ್ಯವಾದರೆ, ಆ ದಿನದ ಸಾಯಂಕಾಲದಲ್ಲಿ ಅವರಿಗೆ ಕರ್ತನ ಭೋಜನವನ್ನು ನೀಡಬಹುದು. ರೋಗದಲ್ಲಿರುವವರು, ಅಂಗವಿಕಲರು, ಆಸ್ಪತ್ರೆ ಸೇರಿರುವ ನಿಮಿತ್ತ ಸಭೆಗೆ ಸೇರಿಬರಲು ಸಾಧ್ಯವಾಗದೆ ಇರಬಹುದು.

ಅವರನ್ನು ಸಂಧಿಸಿ ಅವರಿಗೆ ಕರ್ತನ ಭೋಜನವನ್ನು ನೀಡುವದು, ಅವರ ಆತ್ಮೀಕ ಜೀವಿತಕ್ಕೆ ಸಹಾಯಕರವಾಗಬಹುದು. ಸಭೆಯ ಸದಸ್ಯರು ಅವರ ಬಳಿಗೆ ಹೋಗಿ ಹಾಡನ್ನು ಹಾಡಿ, ಪ್ರಾರ್ಥನೆ ಮಾಡಿ, ಸಂಕ್ಷಿಪ್ತ ವಾಕ್ಯ ವನ್ನು ನೀಡಿ ಅವರನ್ನು ಪ್ರೋತ್ಸಾಹಿಸಬಹುದು. ಇವೆಲ್ಲವು ಜನರ ಆತ್ಮೀಕ ಜೀವನಕ್ಕೆ ಪ್ರಮುಖವಾಗಿರುತ್ತದೆ.

ಕೆಲ ಸದಸ್ಯರು ಕರ್ತನ ಭೋಜನಕ್ಕೆ ಮಾತ್ರ ಬಂದು, ಇತರೆ ಸಂಗತಿಗಳಿಗೆ ಆದ್ಯತೆ ನೀಡದೆ ಇರಬಹುದು, ಯಥಾರ್ಥ ಕಾರಣಗಳಿದ್ದರೆ, ಇದನ್ನು ಒಪ್ಪಿಕೊಳ್ಳಬಹುದು.

### ಸಾರಾಂಶ

ಕರ್ತನ ದಿನದಲ್ಲಿ, ಸಭೆಯು ಕರ್ತನ ಭೋಜನಕ್ಕಾಗಿ ಸೇರುವದು, ಕ್ರೈಸ್ತ ಜೀವಿತದ ಒಂದು ಪ್ರಮುಖ ಅಂಶವಾಗಿದೆ. ಕರ್ತನ ಭೋಜನವನ್ನು ನೀಡುವವನು ಹಾಗೂ ಅದರಲ್ಲಿ ಪಾಲುದಾರನಾಗುವವನು ರೊಟ್ಟಿಯನ್ನು ತಿಂದು ದ್ರಾಕ್ಷಾರಸವನ್ನು ಕುಡಿಯುವದರಿಂದ, ಯೇಸುವಿನ ದೇಹ ಹಾಗೂ ರಕ್ತದಲ್ಲಿ ಪಾಲುದಾರನು ಎಂದು ಗ್ರಹಿಸಿಕೊಳ್ಳಬೇಕು. ಈ ಕಾರ್ಯದಲ್ಲಿ ಪಾಲುಗಾರರಾಗುವವರನ್ನು ಅವರು ಯಾವ ಕ್ರಮದಲ್ಲಿ ಇದನ್ನು ಮಾಡುತ್ತಿರುವರು ಎಂದು ಯೇಸು ಗಮನಿಸುತ್ತಿರುವನೆಂದು ಅರಿಯಬೇಕು.

---

ಟಿಪ್ಪಣಿಗಳು

[1]Ignatius *Smyrnaeans* 8:4, 5. [2]Hippolytus *Apostolic Traditions* 4.10.

---

## ಸಂಪ್ರದಾಯ ಹಾಗೂ ಕರ್ತನ ಭೋಜನ

> "ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರದಾಯದಂತೆ ಯಾಕೆ ನಡೆದುಕೊಳ್ಳುವದಿಲ್ಲ? ಮೈಲಿಗೆಯ ಕೈಯಿಂದ ಯಾಕೆ ಆಹಾರ ತೆಗೆದುಕೊಳ್ಳುತ್ತಾರೆ ಎಂದು ಕೇಳಿದರು. ಅದಕ್ಕೆ ಆತನು - ಕಪಟಿಗಳಾದ ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತನಾಗಿ ಪ್ರವಾದಿಸಿದ್ದಾನೆ; ಅವನು ಬರೆದದ್ದೇನಂದರೆ -
>
> ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ,<br>
> ಆದರೆ ಅವರ ಮನಸ್ಸು ನನಗೆ ದೂರವಾಗಿದೆ.<br>
> ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು<br>
> ಬೋಧಿಸುವದರಿಂದ ನನಗೆ ಭಕ್ತಿ ತೋರಿಸು<br>
> ವದು ವ್ಯರ್ಥ ಎಂಬದೇ.
>
> ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ ಎಂದು ಹೇಳಿದನು. ಆತನು ಇನ್ನೂ ಅವರಿಗೆ - ನೀವು ನಿಮ್ಮ ಸಂಪ್ರದಾಯವನ್ನು ಹಿಡಿದು ನಡಿಸುವದಕ್ಕಾಗಿ ದೇವರ ಆಜ್ಞೆಯನ್ನು ವ್ಯರ್ಥಮಾಡುತ್ತೀರಿ; ಬಹು ಚೆನ್ನಾಗಿದೆಯಲ್ಲವೇ" (ಮಾರ್ಕ 7:5-9).

ಶತಮಾನಗಳಿಂದಲೂ ಕರ್ತನ ಭೋಜನವು ಒಂದು ವಿಧವಾದ ಸಂಪ್ರದಾಯವಾಗಿರುತ್ತದೆ. ವಿವಿಧ ಸಂಪ್ರದಾಯಗಳಿದ್ದರೂ, ಕೆಲವು ಸರಿಯಾಗಿದ್ದರೆ ಇನ್ನು ಕೆಲವು ತಪ್ಪಾಗಿರುತ್ತವೆ. "ಸಂಪ್ರದಾಯ" ಅಂದರೆ (*paradosis*) ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾಯಿಸಲ್ಪಟ್ಟಿರುವದು.

ಮೂರು ವಿಧವಾದ ಸಂಪ್ರದಾಯಗಳಿವೆ:

(1) *ಪ್ರೇರಿತರಾದ* ದೇವ ಜನರು ದೇವರ ಸಂಪ್ರದಾಯಗಳನ್ನು ನೀಡಿದರು. ಅವುಗಳು

ದೇವರಿಂದ ದೊರೆತಿರುವದರಿಂದ, ಎಚ್ಚರದಿಂದ ಗಮನಿಸಬೇಕು.

> ನೀವು ಎಲ್ಲಾದರಲ್ಲಿಯೂ ನನ್ನನ್ನು ಜ್ಞಾಪಕಮಾಡಿಕೊಂಡು ನಾನು ನಿಮಗೆ ತಿಳಸಿಕೊಟ್ಟ ಕಟ್ಟೆಗಳನ್ನು ಅನುಸರಿಸಿ ನಡಿಯುತ್ತೀರೆಂದು ನಿಮ್ಮನ್ನು ಹೊಗಳು ತ್ತೇನೆ (1 ಕೊರಿಂಥ 11:2).
>
> ಹೀಗಿರುವದರಿಂದ ಸಹೋದರರೇ, ದೃಢವಾಗಿ ನಿಲ್ಲಿರಿ. ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ (2 ಥೆಸಲೊನೀಕ 2:15; ನೋಡಿರಿ 3:6).

(2) *ಮಾನವೀಯ ಸಂಪ್ರದಾಯಗಳು, ದೇವರ ಆಯ್ಕೆಗಳೊಂದಿಗೆ ವ್ಯತ್ಯಾಸಗಳನ್ನು ಮಾಡಿ,* ದೇವರ ಆಜ್ಞೆಗಳಿಗೆ ವಿರುದ್ಧವಾದ ಸಂಪ್ರದಾಯಗಳಾಗಿರುತ್ತವೆ (ಮಾರ್ಕ 7:13). ಉದಾಹರಣೆ ದ್ರಾಕ್ಷಾರಸದ ಬದಲು, ನೀರನ್ನು ಬಳಸುವದು (ಮತ್ತಾಯ 26:28, 29). ಮತ್ತು ಮುಳುಗು ದೀಕ್ಷಾಸ್ನಾನದ ಬದಲು, ಚಿಮುಕಿಸುವ ದೀಕ್ಷಾಸ್ನಾನ (ರೋಮಾಪುರ 6:4; ಕೊಲೊಸ್ಸೆ 2:12). ಇಂಥವುಗಳೆಲ್ಲವು ಮನುಷ್ಯನು ಕಂಡು ಹಿಡಿದಿರುವ ಆಚರಣೆಯಾಗಿವೆ. ಈ ವಿಧವಾದ ಸಂಪ್ರದಾಯಗಳ ಮನುಷ್ಯರನ್ನು, ದೇವರ ಸತ್ಯದಿಂದ ದೂರಮಾಡುತ್ತವೆ (ತೀತ 1:14). ಇಂಥವುಗಳನ್ನು ದೇವರು ಒಪ್ಪಿಕೊಳ್ಳುವದಿಲ್ಲ (ಮತ್ತಾಯ 15:2-6; ಮಾರ್ಕ 7:3, 7-13; ಗಲಾತ್ಯ 1:14; ಕೊಲೊಸ್ಸೆ 2:8).

(3) *ದೇವರ ಅಪ್ಪಣೆಗಳನ್ನು ದೂರ ಮಾಡದ, ಮಾನವನ ಸಂಪ್ರದಾಯಗಳು* ಕುಟುಂಬದ ರಾಷ್ಟ್ರೀಯ ಧಾರ್ಮಿಕವಲ್ಲದವರ ರಜೆಗಳ ಸಂಪ್ರದಾಯದ ಆಚರಣೆಗಳಾಗಿ ರುತ್ತವೆ. ಅಥವಾ ಹೊಸ ಒಡಂಬಡಿಕೆಯ ಆಚಾರಗಳ ಆಚರಣೆಯ ಸಂಪ್ರದಾಯವಾಗಿ ರುತ್ತದೆ. ಉದಾಹರಣೆ ಸಭೆಯಾಗಿ ಸೇರಿಬರುವ ಸಮಯ, ಆರಾಧನೆಯ ಚಟುವಟಿಕೆಯ ಕ್ರಮಗಳು, ಮನೆಯಲ್ಲಿ ಸೇವಿಸುವ ಆಹಾರ (ರೋಮಾಪುರ 14:2, 3; ಕೊಲೊಸ್ಸೆ 2:16; 1 ತಿಮೊಥೆ 4:1-4). ನಾವು ಆಚರಿಸುವ ಕೆಲವು ಸಂಪ್ರದಾಯಗಳು, ಯಾವದನ್ನು ಸೇರಿ ಸುವದೂ ಇಲ್ಲ ಅಥವಾ ಕಳೆಯುವದೂ ಇಲ್ಲ, ಅಥವಾ ಹೊಸ ಒಡಂಬಡಿಕೆಯ ಬೋಧನೆ ಗಳನ್ನು ಬದಲಾಯಿಸುವದೂ ಇಲ್ಲ, ಆದರೆ ನಾವು ಅವುಗಳನ್ನು ಒತ್ತಾಯಿಸಬಾರದು.